# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 591 |
| 2 | ಸದಸ್ಯರ ಹೆಸರು | : | ಶ್ರೀ ಶಶೀಲ್ ಜಿ ನಮೋಶಿ (ಶಿಕ್ಷಕರ ಕ್ಷೇತ್ರ) |
| 3 | ಉತ್ತರಿಸುವ ದಿನಾಂಕ | : | 11.12.2025 |
| 4 | ಉತ್ತರಿಸುವ ಸಚಿವರು | : | ಗೃಹ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ಕೆಎಸ್‌ಆರ್‌ಪಿ ಮತ್ತು ಐಆರ್‌ಬಿ ಘಟಕಗಳನ್ನು ಪ್ರತ್ಯೇಕಿಸಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರೂಪಿಸಿರುವುದರಿಂದ ಐಆರ್‌ಬಿ ಮುನಿರಾಬಾದ್ ಘಟಕಕ್ಕೆ ಸಂಯೋಜಿತ ಜೇಷ್ಠತೆ (Combined Seniority) ಆಧಾರದ ಮೇಲೆ ಕೆಎಸ್‌ಆರ್‌ಪಿ ಯ 400 ಸಿಬ್ಬಂದಿಗಳನ್ನು ಈಗಾಗಲೇ ಪದೋನ್ನತಿ ಮತ್ತು ಸ್ಥಳ ನಿಯುಕ್ತಿ ಮಾಡಿದ್ದು ಕಲ್ಯಾಣ ಕರ್ನಾಟಕದಲ್ಲಿ ಸ್ಥಳ ನಿಯುಕ್ತಿಗೆ ಖಾಲಿ ಹುದ್ದೆಗಳೆ ಇಲ್ಲದಿರುವುದು ಸಿಬ್ಬಂದಿಗಳಿಗೆ ದಿಕ್ಕುತೋಚದಂತಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡಿರುವ ಕ್ರಮವೇನು; | ಕರ್ನಾಟಕ ರಾಜ್ಯ ಮೀಸಲು ಪೊಲೀಸ್ ಅಧೀನ ಒಟ್ಟು 12 ಘಟಕಗಳಲ್ಲಿ 6ನೇ ಪಡೆ, ಕಲಬುರಗಿ ಪ್ರಾದೇಶಿಕ ಸ್ಥಳೀಯ ಘಟಕವೆಂದು ಹಾಗೂ ಬೆಂಗಳೂರು ನಗರ ವ್ಯಾಪ್ತಿಯ 1ನೇ ಪಡೆ, 3ನೇ ಪಡೆ, 4ನೇ ಪಡೆ, 9ನೇ ಪಡೆ ಹಾಗೂ ಕರ್ನಾಟಕ ರಾಜ್ಯ ಮೀಸಲು ಪೊಲೀಸ್ ತರಬೇತಿ ಶಾಲೆ, ಕಂಗ್ರಾಳಿ, ಬೆಳಗಾವಿ ಘಟಕವು ರಾಜ್ಯ ಮಟ್ಟದ ಸ್ಥಳೀಯ ಘಟಕಗಳೆಂದು ಗುರುತಿಸಲಾಗಿರುತ್ತದೆ.<br><br>ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿಯು ಅರ್ಜಿ ಸಂಖ್ಯೆ:1592-1599/2020ರ ಸಂಬಂಧ ದಿನಾಂಕ: 31.10.2023 ರಂದು ನೀಡಿರುವ ತೀರ್ಪಿನಲ್ಲಿ ಕರ್ನಾಟಕ ರಾಜ್ಯ ಮೀಸಲು ಪೊಲೀಸ್ (ಕೆಎಸ್‌ಆರ್‌ಪಿ) ಹಾಗೂ ಭಾರತ ಮೀಸಲು ಪಡೆ ಘಟಕಗಳ ಹುದ್ದೆಗಳು (ಐಆರ್‌ಬಿ) ವಿಭಿನ್ನ ವೃಂದಗಳಾಗಿರುವುದರಿಂದ (Distinct Cadres) ಜೇಷ್ಠತಾ ಪಟ್ಟಿಗಳನ್ನು ಪ್ರತ್ಯೇಕವಾಗಿರಿಸಿ ಕ್ರಮವಹಿಸಲು ನಿರ್ದೇಶಿಸಲಾಗಿರುತ್ತದೆ.<br><br>ಕರ್ನಾಟಕ ರಾಜ್ಯ ಮೀಸಲು ಪೊಲೀಸ್ ಘಟಕಗಳಿಂದ ಮುಂಬಡ್ತಿ / ವರ್ಗಾವಣೆ ಅಥವಾ ಇನ್ಯಾವುದೇ ಕಾರಣಗಳಿಂದ ಭಾರತ ಮೀಸಲು ಪಡೆ ಘಟಕಗಳಿಗೆ ಸ್ಥಳ ನಿಯುಕ್ತಿಗೊಂಡವರನ್ನು ಮತ್ತು ಅದೇ ಕಾರಣದಿಂದ ಭಾರತ ಮೀಸಲು ಪೊಲೀಸ್ ಘಟಕಗಳಿಂದ ಕರ್ನಾಟಕ ರಾಜ್ಯ ಮೀಸಲು ಪೊಲೀಸ್ ಘಟಕಕ್ಕೆ ಸ್ಥಳ ನಿಯುಕ್ತಿಗೊಂಡ ಕಲ್ಯಾಣ ಕರ್ನಾಟಕ ವೃಂದದವರನ್ನು ಮೇಲ್ಕಾಣಿಸಿದ ವಿವರದಂತೆ ಪ್ರಾದೇಶಿಕ ಸ್ಥಳೀಯ ಹಾಗೂ ರಾಜ್ಯಮಟ್ಟದ ಸ್ಥಳೀಯ ವೃಂದಗಳ ಮಾತ್ರ ಘಟಕಗಳಿಗೆ ಹಿಂದಿರುಗಿಸಿ ಸರಿದೂಗಿಸಲು ಪರಿಶೀಲಿಸಲಾಗುತ್ತಿದೆ. |
| ಆ. | ಪ್ರತ್ಯೇಕ ಕೆಎಸ್‌ಆರ್‌ಪಿ ಘಟಕವಿಲ್ಲವಾದ್ದರಿಂದ ಬಡ್ತಿ ಇಲ್ಲದೆ, ನೇಮಕಾತಿ ಹೊಂದಿದ ಹುದ್ದೆಯಲ್ಲಿಯೇ ನಿವೃತ್ತಿ ಹೊಂದುವ ಪರಿಸ್ಥಿತಿ ಕಲ್ಯಾಣ ಕರ್ನಾಟಕದ ಕೆಎಸ್‌ಆರ್‌ಪಿ ಅಧಿಕಾರಿ/ | ಕರ್ನಾಟಕ ರಾಜ್ಯ ಮೀಸಲು ಪೊಲೀಸ್ ಅಧೀನ ಒಟ್ಟು 12 ಘಟಕಗಳಲ್ಲಿ 6ನೇ ಪಡೆ, ಕಲಬುರಗಿ ಪ್ರಾದೇಶಿಕ ಸ್ಥಳೀಯ ಘಟಕವೆಂದು ಹಾಗೂ ಬೆಂಗಳೂರು ನಗರ ವ್ಯಾಪ್ತಿಯ 1ನೇ ಪಡೆ, 3ನೇ ಪಡೆ, 4ನೇ ಪಡೆ, 9ನೇ ಪಡೆ ಹಾಗೂ ಕರ್ನಾಟಕ ರಾಜ್ಯ |

| | | |
|---|---|---|
| | ಸಿಬ್ಬಂದಿಗಳಿಗೆ ಎದುರಾಗಿದ್ದು, ಮಾನಸಿಕ ಖಿನ್ನತೆಗೆ ಒಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಮೀಸಲು ಪೊಲೀಸ್ ತರಬೇತಿ ಶಾಲೆ, ಕಂಗ್ರಾಳಿ, ಬೆಳಗಾವಿ ಘಟಕವು ರಾಜ್ಯ ಮಟ್ಟದ ಸ್ಥಳೀಯ ಘಟಕಗಳೆಂದು ಗುರುತಿಸಲಾಗಿದ್ದು, ಕಲ್ಯಾಣ ಕರ್ನಾಟಕದ ಅಧಿಕಾರಿ/ಸಿಬ್ಬಂದಿಗಳಿಗೆ ಅರ್ಹತೆ ಮತ್ತು ಜೇಷ್ಠತೆ ಆಧಾರದ ಮೇಲೆ ಮುಂಬಡ್ತಿ ನೀಡುವಾಗ ರಾಜ್ಯವ್ಯಾಪ್ತಿ ಸ್ಥಳೀಯ ವೃಂದಗಳೆಂದು ಗುರುತಿಸಿರುವ ಹುದ್ದೆಗಳಲ್ಲಿ ನಿಯೋಜನೆ, ಮುಂಬಡ್ತಿ, ವಯೋನಿವೃತ್ತಿ ಹಾಗೂ ಇನ್ನಿತರೆ ಕಾರಣಗಳಿಂದ ರಿಕ್ತವಾಗುವ ಹುದ್ದೆಗಳಿಗೆ ಮುಂಬಡ್ತಿ ನೀಡಲಾಗುತ್ತಿದ್ದು, ಕಲ್ಯಾಣ ಕರ್ನಾಟಕದ ಕೆ.ಎಸ್.ಆರ್.ಪಿ. ಅಧಿಕಾರಿ / ಸಿಬ್ಬಂದಿಗಳು ಪದೋನ್ನತಿ ಇಲ್ಲದೆ ನೇಮಕಾತಿ ಹೊಂದಿದ ಹುದ್ದೆಯಲ್ಲಿಯೇ ನಿವೃತ್ತಿ ಹೊಂದುವ ಪರಿಸ್ಥಿತಿ ಉದ್ಭವವಾಗುವುದಿಲ್ಲ. |
| **ಇ.** | ಕಲ್ಯಾಣ ಕರ್ನಾಟಕದಲ್ಲಿ ಹೆಚ್ಚುವರಿಯಾಗಿರುವ ಕೆಎಸ್ಆರ್‌ಪಿ ಸಿಬ್ಬಂದಿಗಳ ಸ್ಥಳ ನಿಯುಕ್ತಿ ಹಾಗೂ ಪದೋನ್ನತಿ ಸಮಸ್ಯೆ ಪರಿಹಾರಕ್ಕಾಗಿ ರಾಯಚೂರು ಜಿಲ್ಲೆಯಲ್ಲಿ ಕೆಎಸ್ಆರ್‌ಪಿ ಪಡೆ ಸ್ಥಾಪಿಸಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದರೂ ಕೂಡ ಕ್ರಮ ಕೈಗೊಳ್ಳದೇ ತಿರಸ್ಕೃತಗೊಳಿಸಲು ಕಾರಣಗಳೇನು? | ಪ್ರಸಕ್ತ ಸಾಲಿಗೆ ರಾಯಚೂರು ಜಿಲ್ಲೆಯಲ್ಲಿ ಹೊಸದಾಗಿ ಕೆಎಸ್ಆರ್‌ಪಿ ಪಡೆಯನ್ನು ಸ್ಥಾಪಿಸುವ ಪ್ರಸ್ತಾವನೆಯನ್ನು ಪರಿಗಣಿಸಲು ಅವಕಾಶವಿರುವುದಿಲ್ಲ. |

**ಹೆಚ್‌ಡಿ 182 ಪಿಪಿಎ 2025**

(**ಡಾ|| ಜಿ. ಪರಮೇಶ್ವರ**)
ಗೃಹ ಸಚಿವರು